ಬಂದೊ! ನಮ್ಮ ಗುರಿ ಏನು? ನೈತಿಕ ಪ್ರಜ್ಞೆಯೆ ಮಬ್ಬಾಗಿದೆಯಲ್ಲಾ' ಎಂದು ಗೋವಿಂದ ಅದಾಗಲೆ ಹತ್ತನೇ ಸಲ ರಾಗ ತೆಗೆದಿದ್ದ. 'ಕೂತುಕೊಳ್ರೀರೀ; ಅವೆಲ್ಲ ಮಾತು ಯಾಕೆ? ಯಾತಕ್ಕಾಗಿ ಬಂದಿದ್ದು ಎಂದು ನಿಮಗೂ ಗೊತ್ತು ನನಗೂ ಗೊತ್ತು. ಇಬ್ಬರದೂ ನಾಟಕ... ನಾಟಕದ ಒಳಗೆ ಒಂದೊಂದು ನಾಟಕ, ನನಗೆ ಗೊತ್ತಿಲ್ಲವೇನ್ರೀ ನಿಮ್ಮಂತಹ ಬುದ್ಧಿಜೀವಿ ಲೇಖಕರ, ಪತ್ರಕರ್ತರ ಬಂಡವಾಳ! ನಿಮ್ಮ ವ್ಯಾಪಾರ ನಿಮಗೆ ನಮ್ಮ ವ್ಯಾಪಾರ ನಮಗೆ' ಎಂದು ಉಲ್ಟಾ ಹೊಡೆದನೆಂತೆ ಗೋವಿಂದ ಮಧ್ಯೆ ಬಾಯಿ ಹಾಕಿ 'ಲಾಭ ಯಾರಿಗೆ ನಷ್ಟ ಯಾರಿಗೆ' ಎಂದು ಸಿಗರೇಟು ಹಚ್ಚಿದ. 'ಹೌದಾ ಹೇಳ್ಲಾ... ಕಡ್ಡಿ ಗೀರಿದೆಯಲ್ಲಾ ಬೆಂಕಿಯ ಲಾಭ ನನಗೊ ನಿನಗೊ... ಸಿಗರೇಟಿನ ಹೊಗೆ ನಿಂದೊ ನಂದೊ...' ಎಂದು ಸವಾಲು ಎಸೆದಂತೆಯೆ ಅವರಿಬ್ಬರು ಎಲ್ಲಿ ಕೈ ಮಿಲಾಯಿಸಿ ಹೊಡೆದಾಡಿಕೊಳ್ಳುವರೊ ಎಂಬ ಆತಂಕ ಉಂಟಾಯಿತು. ದನಿ ಏರಿದವು. ಲೇಡಿ ಬಾಡಿಗಾರ್ಡುಗಳು ಅತ್ತ ಸರಿದವು. ಇದರಲ್ಲಿ ನನ್ನ ಪಾತ್ರ ಏನೆಂದು ಗೊಂದಲವಾಗಿ ಇಂಥಲ್ಲಿಗೆ ಬರಬಾರದಿತ್ತು ಎಂಬ ಗಿಲ್ಟ್ ಸುಳಿಯಿತು. ಈ ಲೋಕಾನೇ ಹೀಗಲ್ಲವೇ ನಾವು ಎಲ್ಲವನ್ನು ಒಂದು ಅಳತೆಯ ಕನ್ನಡಿಯಲ್ಲಿ ಬಂಧಿಸಿಟ್ಟು ದಿಟ್ಟಿಸುತ್ತೇವೆ. ನೋಡುವ ಸಹಜ ಕ್ರಮವೇ ಮರೆತು ಹೋಗಿದೆ ಎನಿಸಿ ಗಂಟೆಯತ್ತ ನೋಡಿದೆ. ಕುರುಡು ಕಾಲ ಓಡುತ್ತಿತ್ತು. ನಾವು ಅಲ್ಲೆ ಬಿದ್ದು ಹೊರಳಾಡುತ್ತಿದ್ದೆವು. ನಾಯಿಗಳು ಏನೊ ಜೋರಾಗಿ ಬೊಗಳುತ್ತಿದ್ದವು. ಪಹರೆ ಹೊರಗೆ ಗಸ್ತು ತಿರುಗುತ್ತಿತ್ತು. ಭಯವೇ ಇರಲಿಲ್ಲ. ಮತ್ತೆ ಒಂದು ಸುತ್ತು ಗುಂಡು ಹಾಕಿದೆವು.

ಮತ್ತೆ ರಂಗೇರಿತು. ಜೀನಿಯಸ್ ಭಯ ಹುಟ್ಟಿಸುವ ಪ್ರಶ್ನೆಯ ಮುಂದಿಟ್ಟ 'ಆ ಇಟ್ಲರ್ ಯಹೂದಿಗಳ ಬರ್ಬರವಾಗಿ ಕೊಲ್ಲಿಸಿದ್ದನಲ್ಲಾ... ಹಾಗೆಯೇ ನಮ್ಮ ದೇಶದಲ್ಲಿ ಈ ಮುಸ್ಲಿಮರನ್ನೂ ದಲಿತರನ್ನೂ ಕೊಲ್ಲಿಸಲು ಸಾಧ್ಯ ಇದೆಯೇ.' ಅಂತಹ ವಿಸ್ಕಿಯ ಬಿಸಿಯಲ್ಲೂ ಕ್ಷಣಕಾಲ ನನ್ನ ಎದೆ ನಡುಗಿತು. ಆ ಭಯಾನಕ ನರಮೇಧವ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲಾ... ಅಂತಾದ್ದರಲ್ಲಿ ಇಷ್ಟು ತಣ್ಣಗೆ ಈ ಜೀನಿಯಸ್ ರಕ್ತಪಾತದ ಬಗ್ಗೆ ನಮ್ಮ ಸಲಹೆ ಕೇಳುವನಲ್ಲಾ... ಇವನು ಮೊದಲೇ ನಮ್ಮನ್ನೇ ಗ್ಯಾಸ್ ಛೆಂಬರ್‌ಗೆ ಹಾಕುವಂತೆ ಕಾಣುವನಲ್ಲಾ... ಎಲ್ಲಿಯ ಆ ಎರಡನೆ ವಿಶ್ವ ಸಮರದ ಕಾಲದ ಜನಾಂಗೀಯ ಭೇದ; ಬೀಭತ್ಸ ನರಹತ್ಯೆಯ ಬೂದಿಯ ಗುಡ್ಡಗಳ ರಾಶಿ; ಎಲ್ಲಿ ಈ ಜೀನಿಯಸ್ಸನ ರಾಜಕೀಯ ಮಂತ್ರಶಕ್ತಿ.. ನಾವು ಎಲ್ಲಿದ್ದೇವೆ ಎಂದು ದಿಗಿಲಾಯಿತು. ಹೊರಗೆ ಏನೊ ಗುಂಡಿನ ಸದ್ದಾಯಿತು. ಗದ್ದಲ ಕೂಗಾಟ ಊಳಿಡುವ ರಾಕ್ಷಸ ನಾಯಿಗಳ ವಿಚಿತ್ರ ಸದ್ದು. ಬಾಡಿಗಾರ್ಡ್‌ಗಳು ಅಬ್ಬರಿಸುತ್ತಿದ್ದರು. ಕರೆಂಟು ಹೋಯಿತು. ಯಾರೊ ದಾಳಿ ಮಾಡಿದ್ದರು. ಮುಸುಕು ವೇಷ. ಸಿನಿಮೀಯ ಚಲನೆ. ಏನಾಯಿತು ಎಂದು ಪ್ರಾಧ್ಯಾಪಕರು ಜಿಗಿದಿದ್ದರು. ಗೋವಿಂದ ನೆಲಕಚ್ಚಿದ್ದ. ಸ್ಪಷ್ಟವಾಯಿತು. ಯಾರೊ ಪಾತಕಿಗಳು ಬಂದೆರಗಿದ್ದರು. ನಾವು ಚೆಲ್ಲಾಪಿಲ್ಲಿಯಾಗಿದ್ದೆವು. ಆ ಜೀನಿಯಸ್ ನಿರಾಳವಾಗಿಯೇ ಇದ್ದ. ಮಾಯದಲ್ಲಿ ಅವನ ಕೈಗೆ ಗನ್ನು ಬಂದಿತ್ತು. ಪ್ರತಿದಾಳಿಗೆ ಎದುರಾದ. ನಾನು ಸತ್ತೇ ಎಂದು ಅತ್ತ ಓಡುತ್ತಿದ್ದಂತೆಯೆ ಅಡ್ಡಬಂದು ನನ್ನ ಅತ್ತ ದಬ್ಬಿ ಅಬ್ಬರಿಸಿ ಜೀವ ಕಾಪಾಡಿದ್ದ. ಏನಾಯ್ತು ಎಂಬುದೆ ಗೊತ್ತಾಗಿರಲಿಲ್ಲ. ಎಲ್ಲ ಅಸ್ಪಷ್ಟ ಅಸಂಗತ ಸಿನಿಮೀಯ. ಯಾವುದೊ ಘಟನೆ ಎಲ್ಲಿಗೆ ಬಂದು ಯಾರದೊ ಗುಂಡು ಯಾರ ತಲೆಗೊ ಹೊಕ್ಕಂತೆ ಅಭಾಸ. ವಿಚಿತ್ರ ವರ್ತಮಾನ. ಯಾವ ಸನಾತನಿ ರಾಜಕಾರಣವೂ ಉಗ್ರಗಾಮಿಗಳ ಕೈವಾಡವೊ ಎಲ್ಲವೂ ಮಲಿನ ಗಂಗಾನದಿಯಂತೆ ಎಲ್ಲವೂ ಎಲ್ಲೆಲ್ಲಿಗೊ ವ್ಯಾಪಿಸಿಕೊಳ್ಳುತ್ತಿತ್ತು. ಗಾಬರಿಯಲ್ಲಿ ಏನೂ ತೋಚಿರಲಿಲ್ಲ. ಕಂಗೆಟ್ಟಿದ್ದೆವು. ಅವನಿಗೆ ಅವನ ದೇಹದ ಎಚ್ಚರವೇ ಇರಲಿಲ್ಲ. ಅವನ ಕುಂಡಿಗೆ ಮೂರು ಗುಂಡುಗಳು ಒಕ್ಕಿದ್ದರೂ ಆ ಆಘಾತದಲ್ಲಿ ಏನೂ ಗೊತ್ತಾಗಿರಲಿಲ್ಲ... ಏನೋ ಪೆಟ್ಟಾಗಿದೆ ಎಂದು ಸುಮ್ಮನೇ ನಗುತ್ತಾ... ನೋಡಿದಿರಾ ನಮ್ಮ ಗ್ಯಾಸ್ ಟ್ರಬಲ್ ಎಷ್ಟೆಲ್ಲ ಎಂದು ತಮಾಷೆ ಮಾಡಿ ನಗುತ್ತಿದ್ದ. ಆಸ್ಪತ್ರೆಗೆ ದಾಖಲಿಸಿ ಕುಂಡಿಯ ಗುಂಡುಗಳ ತೆಗೆಸಿ ಹೊಲಿಗೆ ಹಾಕಿಸಿ ಅವನನ್ನು ಕಾಪಾಡಿಕೊಳ್ಳುವಲ್ಲಿ ನಮಗೆ ಯಾವ ನಷ್ಟವೂ ಆಗಿರಲಿಲ್ಲ.

ಆದರೆ ಆ ಮರುದಿನ ಪತ್ರಿಕೆಗಳಲ್ಲಿ ಬಹಳ ರೋಚಕ ಸುದ್ದಿ ಪ್ರಕಟವಾಗಿತ್ತು. ಆ ರಾತ್ರಿಯ ಪಾರ್ಟಿ ಮೇಲೆ ದಾಳಿ ಆದಾಗ ಅಲ್ಲಿ ಇಂತಿಂಥವರು ಅಥಿತಿಗಳಾಗಿದ್ದರು ಎಂದು ಪತ್ರಿಕೆಗಳು ಗುಮಾನಿ ಬರುವಂತೆ ಸುದ್ದಿಯನ್ನು ತಿರುಚಿದ್ದವು. ಎಫ್.ಐ.ಆರ್ ದಾಖಲಾಗಿ ಹತ್ಯೆಗೈಯಲು ಬಂದಿದ್ದವರ ಜಾಡು ಹುಡುಕಲು ಪೋಲೀಸರು